## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 10-11-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 194/2022 ಕಲಂ 379 ಐಪಿಸಿ :-

ದಿನಾಂಕ 09/11/2022 ರಂದು 11:30 ಎ,ಎಮ ಗಂಟೆಗೆ ಫರ್ಯಾದಿ ಮಾಣಿಕ ಪ್ರಭು ತಂದೆ ಶಿವರಾಜ ದರ್ಗೊಂಡ ವಯ:18 ವರ್ಷ ಜಾತಿ:ಎಸ,ಟಿ ಗೊಂಡ ಉ:ವಿಧ್ಯಾರ್ಥಿ ಸಾ:ಅಷ್ಟೂರ ತಾ:ಬೀದರ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ, ಇವರ ಹತ್ತಿರವಿರುವ ಹೀರೊ ಸ್ಪೆಲಂಡರ ಪ್ಲಸ್ ಮೊಟರ ಸೈಕಲ ನಂ. ಕೆಎ38ಡಬ್ಲು8264 ನೇದನ್ನು 2020 ಸಾಲೀನಲ್ಲಿ ಖರೀದಿಸಿದ್ದು, ಅದನ್ನು ದಿನಾಂಕ 15/10/2022 ರಂದು ಮುಂಜಾನೆ 1000 ಗಂಟೆಯ ಸಮಯಕ್ಕೆ ಮನೆಯಿಂದ ಬ್ರಿಮ್ಸ ಕಾಲೇಜಗೆ ಬಂದು ಮೊಟರ ಸೈಕಲನ್ನು ಬ್ರಿಮ್ಸ್ ಕಾಲೇಜ ಮುಂದೆ ನಿಲ್ಲಿಸಿ ಕ್ಲಾಸನಲ್ಲಿ ಕುಳಿತು ನಂತರ 2:00 ಪಿ,ಎಮ ಗಂಟೆಗೆ ಉಟ ಮಾಡಿಕೊಂಡು ಮರಳಿ ಮದ್ಯಾಹ್ನ 2:30 ಪಿ.ಎಮ. ಗಂಟೆಯ ಸುಮಾರಿಗೆ ಮರಳಿ ಬಂದು ಮೊಟರ ಸೈಕಲನ್ನು ಸರಕಾರಿ ಆಸ್ಪತ್ರೆಯ ಗೇಟ ನಂ 1 ಮುಂದೆ ನಿಲ್ಲಿಸಿ ಆಸ್ಪತ್ರೆಯಲ್ಲಿ ಕ್ಲಾಸಗೆ ಹೋಗಿ ನಂತರ ಮಧ್ಯಾಹ್ನ 03:30 ಪಿ.ಎಮ್. ಗಂಟೆಗೆ ಆಸ್ಪತೆಯಿಂದ ಹೊರಗೆ ಬಂದು ನೋಡಿದಾಗ ನನ್ನ ಮೊಟರ ಸೈಕಲ ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ಮೊಟರ ಸೈಕಲ ನಂ. KA38W8264 ಚಾ.ನಂ. MBLHAWO81LHA07766 ಇಂಜಿನ ನಂ. HA10AGLHA10149 ಮಾಡಲ್: 2020 ಇದ್ದು ಅಂದಾಜು ಕಿಮ್ಮತ್ತು ರೂ-35,000/-ರೂ ಆಗಿರುತ್ತದೆ. ಕಳುವಾದ ಮೊಟರ ಸೈಕಲನ್ನು ಎಲ್ಲ ಕಡೆಗೆ ಹುಡುಕಾಡಿ ಎಲ್ಲಿಯೂ ಸಿಕ್ಕಿರುವುದಿಲ್ಲ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಮುಡಬಿ ಪೊಲೀಸ ಠಾಣೆ ಅಪರಾಧ ಸಂಖ್ಯೆ 82/2022 ಕಲಂ 78 (3) ಕೆ ಪಿ ಆಕ್ಟ :-

ದಿನಾಂಕ 09-11-2022 ರಂದು 1450 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಮೈಸಲಗಾ ಗ್ರಾಮದ ಗದಲೇಗಾಂವ (ಬಿ) ಕ್ರಾಸನಲ್ಲಿ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಸಾರ್ವಜನೀಕರಿಗೆ 1 ರೂಪಾಯಿಗೆ 90 ರೂಪಾಯಿ ಕೊಡುವುದಾಗಿ ಹೇಳಿ ಮಟಕಾ ಬರೆದುಕೊಳ್ಳುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ಗದಲೇಗಾಂವ ಕ್ರಾಸ ಹತ್ತೀರದ ರೋಡ ಬದಿಯಲ್ಲಿ ನಿಂತು ನೋಡಲು ಎಕಲೂರ - ಮೈಸಲಗಾ ರೋಡಿನ ಮೇಲೆ ಗದಲೇಗಾಂವ ಕ್ರಾಸನಲ್ಲಿ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ರೋಡಿನಲ್ಲಿ ಹೋಗಿ ಬರುವ ಸಾರ್ವಜನಿಕರಿಗೆ ಮಟಕಾ ನಂಬರಗಳು ಬರೆಯಿಸಿರಿ 01 ರೂಪಯಿಗೆ 90 ರೂಪಾಯಿ ಪಡೆಯಿರಿ ಅಂತ ಕೂಗುತ್ತಾ ಬಂದವರಿಂದ ಹಣ ಪಡೆದು ಮಟಕಾ ನಂಬರಗಳನ್ನು ಬರೆದುಕೊಳ್ಳುತ್ತಿರವದನನ್ನು ಹಿಡಿದು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು ಸಂತೋಷ ತಂದೆ ಸುಭಾಷ್ಚಂದ್ರ ಮಾಲಿಪಾಟೀಲ ವಯ: 40 ವರ್ಷ ಜಾ: ಲಿಂಗಾಯತ ಉ: ಕಿರಾಣಾ ವ್ಯಾಪಾರ ಸಾ: ಮೈಸಲಗಾ ತಾಃ ಬಸವ ಕಲ್ಯಾಣ ಅಂತ ತಿಳಿಸಿದನು. ನಂತರ ನಾನು ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಅಂಗ ಜಡ್ತಿ ಮಾಡಲು ಅವನ ಹತ್ತಿರ 2850/- ರೂಪಾಯಿ ನಗದು ಹಣ ಮತ್ತು ಒಂದು ಬಾಲ್ ಪೆನ್ನು ಹಾಗೂ ಎರಡು ಚೀಟಿಗಳು ಅದರ ಮೇಲೆ ಮಟಕಾ ನಂಬರ ಬರೆದವುಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಧನ್ನೂರಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 156/2022 ಕಲಂ 279, 283, 304[ಎ] ಐಪಿಸಿ :-

ದಿನಾಂಕ: 09/11/2022 ರಂದು 1545 ಗಂಟೆಗೆ ಫಿರ್ಯಾದಿ ಶ್ರೀ ರಾಜಕುಮಾರ ತಂದೆ ಬೀರಣ್ಣ ಸಂಗನಾಳೆ ವಯ: 42 ವರ್ಷ ಜಾತಿ: ಎಸ್.ಟಿ ಗೊಂಡು ಉ: ಬಸ ಚಾಲಕ ಮತ್ತು ನಿರ್ವಾಹಕ ಸಾ: ಖಟಕ ಚಿಂಚೊಳಿ ಇವರು ಠಾಣೆಗೆ ಹಾಜರಾಗಿ ದೂರು ಅರ್ಜಿ ನೀಡಿದ್ದು ಅದರ ಸಾರಾಂಶವೇನೆಂದರೆ ದಿನಾಂಕ: 09/11/2022 ರಂದು ಬೆಳಗ್ಗೆ 7.30 ಗಂಟೆ ಸುಮಾರಿಗೆ ಫಿರ್ಯಾದಿ ಮತ್ತು ಬಸ ಚಾಲಕರಾದ ಬಾಲಾಜಿ ತಂದೆ ವಾಮನರಾವ ಲಾಡವಂತೆ ಬಿಲ್ಲೆ: 474 ಮು: ಡಾವರಗಾಂವ ಇಬ್ಬರಿಗೆ KKRTC ಬಸ ನಂ. KA-38 F-711 ನೇದರ ಮೆಲೆ ರೂಟ ನಂ. 05 ಹುಮನಾಬಾದ-ಭಾಲ್ಕಿ ನೇದರ ಮೆಲೆ ನೆಮಕ ಮಾಡಿದ್ದು ಬಸ ಡಿಪೊದಿಂದ ಬಸ ತೆಗೆದುಕೊಂಡು ಭಾಲ್ಕಿ ಬಸ ನಿಲ್ದಾಣದಿಂದ ಬಸ್ಸಿನಲ್ಲಿ ಪ್ರಯಾಣಿಕರನ್ನು ಕೂಡಿಸಿಕೊಂಡು ಹುಮನಾಬಾದಕ್ಕೆ ಹೊಗಿ ಮರಳಿ ಭಾಲ್ಕಿಗೆ ಬಂದಿರುತ್ತೆವೆ. ಭಾಲ್ಕಿಗೆ ಬಂದಾಗ ನಮ್ಮ ಬಸ್ಸಿನ ಹಿಂದಿನ ಗ್ಲಾಸ ಬಿಡಿಂಗ ಹೊಗಿದ್ದರಿಂದ ಬಸ ಡಿಪೊದ ಹೇಡ್ ಮೆಕ್ಯಾನಿಕ

ರವರು ಬೀದರಕ್ಕೆ ಹೊಗಿ ಬಿಡಿಂಗ ಹಾಕಿಕೊಂಡು ಬರಲು ತಿಳಿಸಿದ್ದರಿಂದ ಬೀದರಕ್ಕೆ ಹೊಗಲು ಭಾಲ್ಕಿಯಿಂದ ಪ್ರಯಾಣಿಕರನ್ನು ಕುಡಿಸಿಕೊಂಡು ಬೀದರಕ್ಕೆ ಹೊರಟಿದ್ದು ಬಸ್ಸನ್ನು ಬಾಲಾಜಿ ಲಾಡವಂತೆ ಬಿಲ್ಲೆ: 474 ಇವರು ಚಲಾಯಿಸಿಕೊಂಡಿರುತ್ತಾರೆ. 12.05 ಗಂಟೆ ಸುಮಾರಿಗೆ ಭಾಲ್ಕಿ-ಬೀದರ ರಸ್ತೆಯ ಸೇವಾನಗರ ತಾಂಡಾದ ಹತ್ತಿರ ಹೊಗಿದ್ದಾಗ ಬಸ ಚಾಲಕ ಬಾಲಾಜಿ ಲಾಡವಂತೆ ಇವರು ನಿಸ್ಕಾಳಜಿಯಿಂದ ಹೊಗಿ ಬರುವ ವಾಹನಗಳಿಗೆ ಅಡ್ಡಿ ಆಗುವಂತೆ ರಸ್ತೆಯ ಮದ್ಯದಲ್ಲಿ ಬಸ ನೀಲ್ಲಿಸಿರುತ್ತಾನೆ. ಅದೆ ಸಮಯಕ್ಕೆ ಹಿಂದಿನಿಂದ ಅಂದರೆ ಹಲಬರ್ಗಾ ಕಡೆಯಿಂದ ಒಬ್ಬ ಮೊಟಾರ ಸೈಕಲ ಚಾಲಕ ತನ್ನ ಮೊಟಾರ ಸೈಕಲ ಮೆಲೆ ತನ್ನ ಹಿಂದೆ ಇನ್ನೊಬ್ಬ ವ್ಯಕ್ತಿಗೆ ಕೂಡಿಸಿಕೊಂಡು ಮೊಟಾರ ಸೈಕಲ ಅತಿವೇಗ ಹಾಗು ನಿಸ್ಕಾಳಜಿಯಿಂದ ಚಲಾಯಿಸಿಕೊಂಡು ಬಂದು ಬಸ್ಸಿನ ಹಿಂದುಗಡೆ ಡಿಕ್ಕಿ ಮಾಡಿರುತ್ತಾನೆ. ಸದರಿ ಡಿಕ್ಕಿಯಿಂದ ಮೊಟಾರ ಸೈಕಲ ಚಾಲಕನಿಗೆ ತಲೆಯ ಮೆಲೆ, ಹಣೆಯ ಬಲ ಭಾಗದಲ್ಲಿ, ಎರಡು ಕಣ್ಣುಗಳ ಮೆಲೆ ಭಾರಿ ರಕ್ತಗಾಯ ಮತ್ತು ಇತರೆ ಕಡೆ ಗುಪ್ತಗಾಯಗಳಾಗಿ ಅವರು ಮಾತಾಡುವ ಸ್ಥಿತಿಯಲ್ಲಿ ಇರಲಿಲ್ಲ. ಮೊಟಾರ ಸೈಕಲ ಮೆಲೆ ಹಿಂದೆ ಕುಳಿತ ವ್ಯಕ್ತಿಗೆ ಈ ಡಿಕ್ಕಿಯಿಂದ ಯಾವುದೆ ರೀತಿಯ ಗಾಯಗಳು ಆಗಿರುವುದಿಲ್ಲ. ಆಗ ನಾವು ಮೊಟಾರ ಸೈಕಲ ಮೆಲೆ ಹಿಂದೆ ಕುಳಿತ ವ್ಯಕ್ತಿಗೆ ಅವರ ಹೆಸರು ಮತ್ತು ವಿಳಾಸ ವಿಚಾರಣೆ ಮಾಡಲು ಆತನು ತನ್ನ ಹೆಸರು ವೇಂಕಟ ತಂದೆ ಅನೀಲ ತೆಲಂಗ ವಯ: 18 ವರ್ಷ ಜಾತಿ: ಇಡಗಾರ ಉ: ವಿದ್ಯಾಭ್ಯಾಸ ಮು: ಹಲಬರ್ಗಾ ಮತ್ತು ಗಾಯಾಳು ಮೊಟಾರ ಸೈಕಲ ಚಾಲಕನ ಹೆಸರು ಅಭಿಶೇಕ ತಂದೆ ಸುಧಾಕರ ಎಡುರೆ ವಯ: 19 ವರ್ಷ ಜಾತಿ: ಮರಾಠಾ ಉ: ವಿದ್ಯಾಭ್ಯಾಸ ಮು: ಹಲಬರ್ಗಾ ಅಂತ ತಿಳಿಸಿರುತ್ತಾರೆ. ನಂತರ ಅವರ ಮೊಟಾರ ಸೈಕಲಗೆ ನೊಡಲು ಅದು ಹಿರೊ HF ಡಿಲಕ್ಸ ಮೊಟಾರ ಸೈಕಲ ನಂ. KA-38 S-3731 ಇರುತ್ತದೆ. ನಂತರ ಅಲ್ಲೆ ಇದ್ದ ಜನರು ಗಾಯಾಳು ಅಭಿಶೇಕ ಇತನಿಗೆ ಖಾಸಗಿ ವಾಹನದಲ್ಲಿ ಕುಡಿಸಿಕೊಂಡು ಚಿಕಿತ್ಸೆ ಕುರಿತು ಬೀದರಕ್ಕೆ ಕಳುಹಿಸಿದ್ದು ಚಿಕಿತ್ಸೆ ಫಲಕಾರಿ ಆಗದೆ ಅಭಿಶೇಕ ಈತನು ಮೃತ ಪಟ್ಟಿರುತ್ತಾನೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 184/2022 ಕಲಂ 32, 34 ಕೆಇ ಕಾಯ್ದೆ :-

ದಿನಾಂಕ 09/11/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಖಚಿತ ಬಾತ್ಮಿ ಬಂದಿದ್ದೇನೆಂದರೆ , ಭಾಲ್ಕಿ - ಹುಮನಾಬಾದ ರೋಡಿಗೆ ಇರುವ ಓಂ ಸಾಯಿ ಧಾಬಾದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಸರಾಯಿ ಮಾರಾಟ ಮಾಡುತಿದ್ದಾನೆ ಅಂತ ಖಚೀತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಓಂ ಸಾಯಿ ಧಾಬದ ಹತ್ತಿರ ಹೋಗಿ ಮರೆಯಾಗಿ ನಿಂತು ನೋಡಲು ಧಾಬದ ಪಕ್ಕದಲ್ಲಿ ಒಬ್ಬ ವ್ಯಕ್ತಿ ತನ್ನ ಮುಂದೆ ಒಂದು ಕಾಟನ ಬಾಕ್ಸನಲ್ಲಿ ಸರಾಯಿ ಬಾಟಲಗಳು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುವುದನ್ನು ನೋಡಿ ಖಚೀತ ಪಡಿಸಿಕೊಂಡು, ಸಿಬ್ಬಂದಿಯವರ ಸಹಾಯದಿಂದ ದಾಳಿ ಮಾಡಿ ಸದರಿ ವ್ಯಕ್ತಿಗೆ ಹೀಡಿದು ಆತನ ಹೆಸರು ವಿಳಾಸ ವಿಚಾರಿಸಲು ವಿಜಯಕುಮಾರ ತಂದೆ ಕುಶಾಲರಾವ ವಯಸ್ಸು 42 ವರ್ಷ ಸಾ ; ದೇಶಪಾಂಡೆಗಲ್ಲಿ ಹಳೆ ಭಾಲ್ಕಿ. ಅಂತ ತಿಳಿಸಿದ್ದು ಕಾಟನದಲ್ಲಿ ಪರಿಶೀಲಿಸಿ ನೊಡಲು 1] 180 ಎಂ.ಎಲ್. ವುಳ್ಳ 30 ಒಲ್ಡ ತವೇರನ ವಿಸ್ಕಿ ಸರಾಯಿ ತುಂಬಿದ ಪುಟ್ಟದ ಪೋಚಗಳು ಇದ್ದು ಅದರಲ್ಲಿ ಪ್ರತಿಯೊಂದು ಬಾಟಲ ಅ ;ಕಿ; 87/- ರೂ ಇದ್ದು ಹೀಗೆ ಒಟ್ಟು ಎಲ್ಲಾ ಅ;ಕಿ; 2,610/- ರೂ. ಬೆಲೆಬಾಳುವ ಸರಾಯಿ ಪೋಚಗಳು ಇದ್ದು ಇವಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.